# ಕಿರಿಯ ಸಹಾಯಕ ಹುದ್ದೆಯ ನೇಮಕಾತಿ ವಿವರಗಳು

| | |
|---|---|
| ಹುದ್ದೆಯ ಹೆಸರು | ಕಿರಿಯ ಸಹಾಯಕರು |
| ಹುದ್ದೆಗಳ ಸಂಖ್ಯೆ | 06 |
| ವಿದ್ಯಾರ್ಹತೆ: | ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ |
| ತಾಂತ್ರಿಕ ಅರ್ಹತೆ | ಕಂಪ್ಯೂಟರ್ ಬಳಕೆಯ ಜ್ಞಾನ (ಕಡ್ಡಾಯ) |
| ವಯೋಮಿತಿ | 4ನೇ ಜುಲೈ 2024 ಕ್ಕೆ 28 ವರ್ಷಗಳನ್ನು ಮೀರಿರಬಾರದು. |

## ಅರ್ಹತೆಯ ನಿಯಮಗಳು ಮತ್ತು ಷರತ್ತುಗಳು

1. ನೇಮಕಾತಿ ಪ್ರಕ್ರಿಯೆಯು ಆನ್‌ಲೈನ್ ಪರೀಕ್ಷೆ ಮತ್ತು ಮೌಖಿಕ ಸಂದರ್ಶನದ ಮೂಲಕ ನಡೆಯಲಿದೆ.
2. ಅರ್ಹ ಅಭ್ಯರ್ಥಿಗಳು ನೇಮಕಾತಿ ವಿವರಗಳನ್ನು ಜಾಗರೂಕತೆಯಿಂದ ಓದಿಕೊಂಡು ಅರ್ಜಿಯ ಎಲ್ಲಾ ಕಾಲಂಗಳನ್ನು ಆನ್‌ಲೈನ್ ಮೂಲಕ ಸಂಪೂರ್ಣ ಭರ್ತಿ ಮಾಡಿದ ನಂತರವೇ ಸಲ್ಲಿಸತಕ್ಕದ್ದು. ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
3. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ನಂತರ, ಯಶಸ್ವಿಯಾಗಿ ಸಲ್ಲಿಕೆಯಾದ ಕುರಿತು ಮಾಹಿತಿಯನ್ನು ನೋಂದಣಿ ಮಾಡಿದ ಇ-ಮೇಲ್ ಐ.ಡಿ ಗೆ ಕಳುಹಿಸಲಾಗುವುದು**(ಅಭ್ಯರ್ಥಿಗಳು ತಮ್ಮ ಇ-ಮೇಲ್ ಐ.ಡಿ ಹಾಗೂ ಮೊಬೈಲ್ ಸಂಖ್ಯೆಯನ್ನು ನಮೂದಿಸುವಾಗ ಜಾಗರೂಕತೆ ವಹಿಸತಕ್ಕದ್ದು)**
4. ಈ ಪರೀಕ್ಷೆಯು ಆನ್‌ಲೈನ್ ಮೂಲಕ ನಡೆಯುವುದರಿಂದ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ತಾವಿರುವ ಸ್ಥಳದಿಂದಲೇ ಇಂಟರನೆಟ್ ಸೌಲಭ್ಯ ಮತ್ತು ಕ್ಯಾಮರಾ ಹೊಂದಿರುವ ಸ್ಮಾರ್ಟ ಪೋನ್/ಲ್ಯಾಪ್‌ಟಾಪ್/ ಕಂಪ್ಯೂಟರ್ ಮೂಲಕ ಆನ್‌ಲೈನ್ ಪರೀಕ್ಷೆಗೆ ಹಾಜರಾಗಬಹುದು. ಕಾರಣ ಪರೀಕ್ಷೆಗೆ ಅಗತ್ಯವಿರುವಷ್ಟು ಬ್ಯಾಟರಿ ಬ್ಯಾಕಪ್ ಮತ್ತು ಇಂಟರ್‌ನೆಟ್ ಡಾಟಾವನ್ನು ಹೊಂದಿರಬೇಕು.
5. **ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕ: 14-07-2024 ಸಾಯಂಕಾಲ 5.00 ಗಂಟೆ.**
6. ಪರೀಕ್ಷೆಯ ಶುಲ್ಕ **ರೂ.200=00 ನ್ನು (ಜಿ.ಎಸ್.ಟಿ ಸೇರಿ)** ಆನ್‌ಲೈನ್ ಮೂಲಕವೇ ಪಾವತಿಸತಕ್ಕದ್ದು.
7. ಅರ್ಜಿಯಲ್ಲಿ ನಮೂದಿಸಿದ ಇ-ಮೇಲ್ ಐ.ಡಿ ಗೆ ಆನ್‌ಲೈನ್ ಪರೀಕ್ಷೆಯ ಲಿಂಕ್‌ನ್ನು ಪರೀಕ್ಷಾ ದಿನದಂದು ಮತ್ತು ಪರೀಕ್ಷೆಯ ಸಮಯಕ್ಕೆ ಮುಂಚಿತವಾಗಿ ಕಳುಹಿಸಲಾಗುವುದು. ಅರ್ಹ ಅಭ್ಯರ್ಥಿಗಳು ಈ ಲಿಂಕ್ ನ್ನು ಬಳಸಿ ಆನ್‌ಲೈನ್ ಪರೀಕ್ಷೆಗೆ ಹಾಜರಾಗಬಹುದು.
8. **ಆನ್‌ಲೈನ್ ಪರೀಕ್ಷೆಯ ದಿನಾಂಕ : 21-07-2024, ರವಿವಾರ**
   **ಸಮಯ : ಬೆಳಗ್ಗೆ 10.30 ಗಂಟೆಯಿಂದ**
   **ಅವಧಿ : 60 ನಿಮಿಷಗಳು/1 ಗಂಟೆ (80 ಬಹು ಆಯ್ಕೆ ಪ್ರಶ್ನೆಗಳು)**
9. ಆನ್‌ಲೈನ್ ಪರೀಕ್ಷೆಯ ಲಿಂಕ್ ದಿನಾಂಕ: **21-07-2024 ರಂದು ಸರಿಯಾಗಿ ಬೆಳಗ್ಗೆ 10.30 ಗಂಟೆಗೆ** ಓಪನ್ ಆಗಲಿದ್ದು, ನಿಗದಿಪಡಿಸಿದ ಪರೀಕ್ಷೆಯ ಸಮಯದ ನಂತರ ತನ್ನಿಂದ ತಾನೇ ಸ್ವಯಂಚಾಲಿತವಾಗಿ ಮುಕ್ತಾಯವಾಗಲಿದೆ.

10. ಪರೀಕ್ಷೆಯ ಮಾದರಿ ಈ ಕೆಳಗಿನಂತಿರುತ್ತದೆ.

| Name of the Subject | No. of Questions | Marks |
|---|---|---|
| Banking | 20 | 20 |
| Computer Knowledge | 20 | 20 |
| Kannada Knowledge | 20 | 20 |
| General Knowledge | 20 | 20 |
| Total | 80 | 80 |

ಯಾವುದೇ ರೀತಿಯ ಋಣಾತ್ಮಕ(Negative) ಅಂಕಗಳು ಇರುವುದಿಲ್ಲ.

**11.** ಆನ್‌ಲೈನ್ ಪರೀಕ್ಷೆಯು ಸಂಪೂರ್ಣ ಆನ್‌ಲೈನ್ ಮೇಲ್ವಿಚಾರಣೆ ವ್ಯವಸ್ಥೆ ಹೊಂದಿದ್ದು, ಅಭ್ಯರ್ಥಿಯ ಪ್ರತಿ ಚಲನ-ವಲನಗಳನ್ನು ಆಗಾಗ್ಗೆ ಸ್ವಯಂಚಾಲಿತವಾಗಿ ಫೋಟೋಗಳನ್ನು ತೆಗೆದುಕೊಳ್ಳುವ ಕ್ರಮ ತೆಗೆದುಕೊಳ್ಳಲಾಗಿದೆ. ಕಾರಣ ಅಭ್ಯರ್ಥಿಗಳು ಆನ್‌ಲೈನ್ ಪರೀಕ್ಷೆಗೆ ಹಾಜರಾದ ಸಮಯದಲ್ಲಿ ಸ್ಥಳ ಬದಲಾಯಿಸುವುದು ಅಥವಾ ಇತರೇ ಸೈಟ್‌ಗಳನ್ನು ಓಪನ್ ಮಾಡುವುದು ಅಥವಾ ಬೇರೆಯವರ ಸಹಾಯ ಪಡೆಯುವುದು ಅಥವಾ ಬೇರೆ ಇನ್ನಿತರ **ಯಾವುದೇ ತರನಾದ ಅಕ್ರಮದಲ್ಲಿ ಭಾಗಿಯಾಗುವ ಮತ್ತು ಅನಪೇಕ್ಷಿತ ನಡವಳಿಕೆ ಕಂಡುಬಂದರೆ, ಅಂತಹ ಅಭ್ಯರ್ಥಿಗಳನ್ನು ಪರೀಕ್ಷೆಯ ಪ್ರಕ್ರಿಯೆಯಿಂದ ಅನರ್ಹಗೊಳಿಸಲಾಗುವುದು**.

12. ಆನ್‌ಲೈನ್ ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಅಂಕ ಗಳಿಸಿ **ಮೌಖಿಕ ಸಂದರ್ಶನಕ್ಕೆ ಅರ್ಹತೆ ಗಳಿಸುವ ಅಭ್ಯರ್ಥಿಗಳ ಪಟ್ಟಿಯನ್ನು (1:5 ರ ಅನುಪಾತದಂತೆ) ಸಹಕಾರಿಯ ವೆಬ್‌ಸೈಟ್‌ನಲ್ಲಿ ದಿನಾಂಕ: 22-07-2024** ರಂದು **ಬೆಳಗ್ಗೆ ಪ್ರಕಟಿಸಲಾಗುವುದು**. ಮೌಖಿಕ ಸಂದರ್ಶನಕ್ಕೆ ಅರ್ಹತೆ ಗಳಿಸಿದ ಅಭ್ಯರ್ಥಿಗಳಿಗೆ ಇ-ಮೇಲ್/ ಎಸ್.ಎಮ್.ಎಸ್/ವ್ಯಾಟ್ಸಪ್ ಮೂಲಕ ತಿಳಿಸಲಾಗುವುದು.

13. **ಮೌಖಿಕ ಸಂದರ್ಶನವು ದಿನಾಂಕ: 24-07-2024, ಬುಧವಾರ ರಂದು ಸಹಕಾರಿಯ ಕೇಂದ್ರ ಕಛೇರಿ, ಮಸ್ಕಿಯಲ್ಲಿ ಬೆಳಗ್ಗೆ 10-30 ಗಂಟೆಯಿಂದ ನಡೆಯುವುದು**.

14. ತಾಂತ್ರಿಕ ಮತ್ತು ಇತರೇ ಸೂಚನೆಗಳನ್ನು ಸಹಕಾರಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು, ಅಭ್ಯರ್ಥಿಗಳು ಸದರಿ ಮಾಹಿತಿಯನ್ನು ಪಡೆಯಬಹುದು.

15. ಸಹಕಾರಿಯು ಯಾವುದೇ ಅರ್ಜಿಯನ್ನು ಒಪ್ಪಿಕೊಳ್ಳುವ/ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತದೆ.

16. ಹೆಚ್ಚಿನ ಮಾಹಿತಿಗೆ ಈ ದೂರವಾಣಿಗಳಿಗೆ ಸಂಪರ್ಕಿಸಿ: 7022900821/7022900822/9035053462 **(ಬೆಳಗ್ಗೆ 9-00 ಗಂಟೆಯಿಂದ ಸಾಯಂಕಾಲ 6-00 ಗಂಟೆವರೆಗೆ ಮಾತ್ರ)**